

ಪ್ರತಿಷ್ಠಿತ 'ಸಾಮಗಾನ ಮಾತಂಗ ರಾಷ್ಟ್ರೀಯ ಪ್ರಶಸ್ತಿ' ಸ್ವೀಕರಿಸಿದ ವಿದುಷಿ ಸುಧಾ ರಘುನಾಥನ್. ರಂಗಕಲಾವಿದೆ ಅರುಂಧತಿನಾಗ್, ಸಾಮಗಾನ ಸಭಾದ ಅಧ್ಯಕ್ಷ ಆರ್.ಆರ್.ರವಿಶಂಕರ್, ಟ್ರಸ್ಟಿಗಳಾದ ಗೀತಾ ಸಿ.ಎಸ್. ಎಲ್.ಎಸ್. ಶ್ಯಾಮಸುಂದರ ಶರ್ಮ ಚಿತ್ರದಲ್ಲಿದ್ದಾರೆ.

# ಸಂಗೀತದಲ್ಲಿ ದಾಖಲೆಯ ಭಾಷ್ಯ

ವಿಶ್ವಸಂಸ್ಥೆಯ ಪ್ರತಿಷ್ಠಿತ ವೇದಿಕೆಯಲ್ಲಿ ಕರ್ನಾಟಕ ಸಂಗೀತದ ಕಂಪನ್ನು ಮಾರ್ದನಿಸಿದ ಹೆಮ್ಮೆ ಚೆನ್ನೈಯ ಕಲಾವಿದೆ ಸುಧಾ ರಘುನಾಥನ್ ಅವರದು. ಐವತ್ತು ವರ್ಷಗಳ ಹಿಂದೆ ಸಂಗೀತ ಸಾಮ್ರಾಜ್ಞಿ ಎಂ.ಎಸ್. ಸುಬ್ಬುಲಕ್ಷ್ಮಿ ಅವರು ಸಂಗೀತ ಕಛೇರಿ ನೀಡಿದ್ದ ವೇದಿಕೆಯಲ್ಲೇ ಕಛೇರಿ ನೀಡಲು ಅವಕಾಶ ಸಿಕ್ಕಿದ್ದು ಸುಧಾ ಅವರ ಹೆಚ್ಚುಗಾರಿಕೆ.

■ ಉಮಾ ಅನಂತ್

ಅದು 1976ನೇ ಇಸವಿ. ವಿಶ್ವಸಂಸ್ಥೆಯ ಅತ್ಯಂತ ಪ್ರತಿಷ್ಠಿತ ವೇದಿಕೆಯಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ಸಾಮ್ರಾಜ್ಞಿ ಎಂ.ಎಸ್. ಸುಬ್ಬುಲಕ್ಷ್ಮಿ ಅವರ ಸಂಗೀತ ಕಛೇರಿ. ಅಂತಹ ಪ್ರತಿಷ್ಠಿತ ವೇದಿಕೆಯಲ್ಲಿ ಮೊಟ್ಟಮೊದಲ ಬಾರಿಗೆ ಕರ್ನಾಟಕ ಸಂಗೀತವನ್ನು ಭಾವತುಂಬಿ, ಹೃದಯತುಂಬಿ ಹಾಡಿದ್ದ ಎಂಎಸ್ ಅಂದು ವಿಶ್ವದ ಎಲ್ಲ ದೇಶಗಳ ಪ್ರತಿನಿಧಿಗಳು ಸೇರಿದ್ದ ಸಭಾಂಗಣದಲ್ಲಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದರು. ಅದಾಗಿ ಐವತ್ತು ವರ್ಷಗಳು ಕಳೆದರೂ ಭಾರತದ ಯಾವುದೇ ಕಲಾವಿದರಿಗೆ ಮತ್ತೆ ಅಂತಹ ಸುವರ್ಣಾವಕಾಶ ಒದಗಿ ಬರಲೇ ಇಲ್ಲ. ಆದರೆ ಅದೃಷ್ಟವೇ ಎಂಬಂತೆ ಮತ್ತೆ ಚೆನ್ನೈಯ ಖ್ಯಾತ ಗಾಯಕಿ ಸುಧಾ ರಘುನಾಥನ್ ಇದೇ ವೇದಿಕೆ ಏರಿದರು. ಇದು ನಡೆದದದ್ದು ಅಕ್ಟೋಬರ್ 2, 2016ರಂದು. ಹೀಗೆ ಭಾರತದ ಇಬ್ಬರು ಮಹಿಳಾ ಕಲಾವಿದರು ವಿಶ್ವವೇದಿಕೆಯಲ್ಲಿ ಕರ್ನಾಟಕ ಸಂಗೀತವನ್ನು ಹಾಡಿ ದಾಖಲೆಯ ಭಾಷ್ಯ ಬರೆದರು.

'ಇಂಥ ಪ್ರತಿಷ್ಠಿತ ವೇದಿಕೆಯಲ್ಲಿ ಹಾಡಲು ಸಿಕ್ಕಿದ್ದೇ ನನ್ನ ಪುಣ್ಯವೆಂದೇ ಹೇಳಬೇಕು..' ಎಂದು ಭಾವುಕರಾಗಿ ಹೇಳುತ್ತಾರೆ ಸುಧಾ ರಘುನಾಥನ್. ಬೆಂಗಳೂರಿನ ಭಾರತೀಯ ಸಾಮಗಾನ ಸಂಗೀತ ಸಭಾ ಈಚೆಗೆ ಚೌಡಯ್ಯ ಹಾಲ್‌ನಲ್ಲಿ ಏರ್ಪಡಿಸಿದ್ದ ಸಂಗೀತ ಹಬ್ಬದಲ್ಲಿ 'ಸಾಮಗಾನ ಮಾತಂಗ ರಾಷ್ಟ್ರೀಯ ಪ್ರಶಸ್ತಿ' ಸ್ವೀಕರಿಸಿದ ಈ ವಿದುಷಿ, ಸಂಗೀತ ಸಂಯೋಜಕಿ, ಬೋಧಕಿ 'ಸುಧಾ'ದೊಂದಿಗೆ ಸಂಗೀತದ ಬಗೆಗಿನ ತಮ್ಮ ಅನುಭವ, ಅನಿಸಿಕೆಗಳನ್ನು ಹಂಚಿಕೊಂಡರು.

'ಅಂದು ಅಂತರರಾಷ್ಟ್ರೀಯ ಅಹಿಂಸಾ ದಿನಾಚರಣೆ. ಅಲ್ಲದೆ ಎಂ.ಎಸ್. ಸುಬ್ಬುಲಕ್ಷ್ಮಿ ಅವರ ಜನ್ಮ ಶತಮಾನೋತ್ಸವ

